Ref.No. 80/2023

MW–1

ದಿನಾಂಕಃ 19–08–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– 1 ನೇ ಪಾರ್ಟಿ ಪರವಾಗಿಃ ಶ್ರೀ. ಎನ್ ಸಿ ಬಿ ವಕೀಲರಿಂದ ಃ

ನಾನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾಗಿ ನೇಮಕಗೊಂಡಿದ್ದಾಗ ನಾನು 2 ನೇ ಪಾರ್ಟಿ ಸಂಸ್ಥೆಯಲ್ಲಿ ಸಿಬ್ಬಂದಿ ಅಧೀಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿ. ವಿಚಾರಣಾ ಕಾಲಕ್ಕೆ ಆರೋಪಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ಹೇಳಿಕೆಯನ್ನು ನೀಡಿದ್ದಂತಹ ಘಟಕ ವ್ಯವಸ್ಥಾಪಕರು ಘಟನೆಯ ಪ್ರತ್ಯಕ್ಷ್ಯ ಸಾಕ್ಷಿಯಾಗಿರುವುದಿಲ್ಲ ಎಂದರೆ ಸರಿ . ವಿಚಾರಣಾ ಕಾಲಕ್ಕೆ ಯಾವುದೇ ಪ್ರತ್ಯಕ್ಷ್ಯ ಸಾಕ್ಷಿ ದಾರರನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ವಿಚಾರಣಾ ಕಾಲಕ್ಕೆ ಘಟಕ ವ್ಯವಸ್ಥಾಪಕರು ಆರೋಪಕ್ಕೆ ಸಂಬಂಧಿಸಿದಂತೆ ಪೋಲಿಸರ ಮುಂದೆ ನೀಡಿದಂತಹ ದೂರನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪಾರ್ಟಿಯವರು ಮುಷ್ಕರದಲ್ಲಿ ಪಾಲ್ಗೊಂಡು ಕರ್ತವ್ಯ ನಿಷ್ಟ ನೌಕರರಿಗೆ ಕರ್ತವ್ಯ ನಿರ್ವಹಿಸಲು ಅಡ್ಡಿಮಾಡುತ್ತಿದ್ದು , ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ಹಚ್ಚುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ .1 ನೇ ಪಾರ್ಟಿಯವರು ಕರ್ತವ್ಯಕ್ಕೆ ಗೈ ರು ಹಾಜರಾಗಿದ್ದರಿಂದ ದೂರು ದಾಖಲು ಮಾಡಿರುತ್ತೇನೆ ಎಂದು ವರದಿಗಾರರು ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿ. 1 ನೇ ಪಾರ್ಟಿಯವರು ಕರ್ತವ್ಯಕ್ಕೆ ಗೈ ರು ಹಾಜರಾಗಿದ್ದ ಬಗ್ಗೆ ದಾಖಲಾತಿಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಗೈ ರು ಹಾಜರಿಗೆ ಸಬಂಧಿಸಿದಂತೆ ಪ್ರತ್ಯೇಕ ಚಾರ್ಚ್ ಶೀಟ್ ನ್ನು ನೇ ಪಾರ್ಟಿಯವರಿಗೆ ನೀಡಲಾಗಿರುತ್ತದೆ. 1 ನೇ ಪಾರ್ಟಿಯವರು ಮುಷ್ಕರಕ್ಕೆ ಕರೆ ಕೊಟ್ಟ ಸಂಘದ ಸದಸ್ಯ ರಾಗಿರುತ್ತಾರೆ ಎಂದು ತೋರಿಸಲು ಘಟಕ ವ್ಯವಸ್ಥಾಪಕರು ಯಾವುದೇ ದಾಖಲಾತಿಯನ್ನು ನನ್ನ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . 1 ನೇ ಪಾರ್ಟಿಯವರು 2 ನೇ ಪಾರ್ಟಿಯವರಿಂದ ಮುಷ್ಕರದಲ್ಲಿ ಪಾಲ್ಗೊಂಡತಹ ನೌಕರರ ಪಟ್ಟಿಯನ್ನು ಅರ್ಜಿಯನ್ನು ನೀಡಿ ಪಡೆದುಕೊಂಡು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ . ಸದರಿ ಪಟ್ಟಿಯಲ್ಲಿ 1 ನೇ ಪಾರ್ಟಿಯವರ ಹೆಸರು ನಮೂದಾಗಿರುವುದಿಲ್ಲ ಎಂದರೆ ಸರಿ .

1 ನೇ ಪಾರ್ಟಿಯವರು ಘಟನೆ ನಡೆದಿದೆ ಎಂಬ ಸಂದರ್ಬದಲ್ಲಿ ಅವರ ಅಣ್ಣನಿಗೆ ಆರೋಗ್ಯ ಸರಿಯಿಲ್ಲದೇ ಇರುವುದರಿಂದ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಎಂದು ಸಾಬೀತು ಪಡಿಸಲು ಅವರ ಅಣ್ಣನ ಸಾಕ್ಷ್ಯ ವಿಚಾರಣೆಯನ್ನು ಮಾಡಿರುತ್ತಾರೆ ಎಂದರೆ ಸರಿ . ಅದೇ ರೀತಿ ಅವರ ಅಣ್ಣನ ವೈದ್ಯಕೀಯ ದಾಖಲಾತಿಗಳನ್ನು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ .

ಆಪಾದನೆಗೆ ಸಂಬಂಧಿಸಿದಂತೆ ಆಪಾದಿತರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದಿದ್ದರೂ ಸಹ ಘಟಕ ವ್ಯವಸ್ಥಾಪಕ ರ ಹೇಳಿಕೆಯ ಆಧಾರದ ಮೇರೆಗೆ ವಿಚಾರಣಾ ನಿರ್ಣಯ ನೀಡಿರುತ್ತೇನೆ ಎಂದರೆ ಸರಿಯಲ್ಲ . ನನ್ನ ವಿಚಾರಣಾ ವರದಿಯಲ್ಲಿ ಆಪಾದಿತರ ಪರವಾಗಿ ಮಾಡಿದಂತಹ ಸಾಕ್ಷ್ಯ ಹೇಳಿಕೆ ಮತ್ತು ದಾಖಲಾತಿಗಳನ್ನು ನಾನು ಪರಿಗಣಿಸಿರುವುದಿಲ್ಲ ಎಂದರೆ ಸರಿಯಲ್ಲ . ನನ್ನ ವಿಚಾರಣಾ ವರದಿಯಲ್ಲಿ ಆಪಾದಿತರು ಮುಷ್ಕರದಲ್ಲಿ ಭಾಗಿಯಾಗಿರುವುದಿಲ್ಲ ಎಂದು ತೋರಿಸಲು ಅವರೆ ದಾಖಲಾತಿಗಳನ್ನು ನೀಡಬೇಕಾಗಿತ್ತು ಎಂದು ನಮೂದಿಸಿರುತ್ತೇನೆ ಎಂದರೆ ಸರಿ . ಆಡಳಿತ ಮಂಡಳಿಯವರು ಆಪಾದನೆಯನ್ನು ಪುಷ್ಟೀಕರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿದ್ದರೂ ಸಹ ಆಡಳಿತ ಮಂಡಳಿಯವರ ಪರವಾಗಿ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ . ಆಡಳಿತ ಮಂಡಳಿಯವರು ಒತ್ತಾಯದ ಮೇರೆಗೆ 1 ನೇ ಪಾರ್ಟಿಯವರು ವಿರುದ್ಧ ಪೂರ್ವಗ್ರಹ ಪೀಡಿತವಾಗಿ ನನ್ನ ವಿಚಾರಣೆ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ . 1 ನೇ ಪಾರ್ಟಿಯವರಿಗೆ ಸಂಬಂಧಿಸಿದತಂ ಿ ಹಿಸ್ಟರಿ ಶೀಟ್ ನ್ನು ನನ್ನ ಮುಂದೆ ಹಾಜರು ಪಡಿಸಿಲ್ಲ ಹಾಗೂ ಆ ಬಗ್ಗೆ ಆಡಳಿತ ಮಂಡಳಿಯವರ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಲಾಗಿರುವುದಿಲ್ಲ ಎಂದರೆ ಸರಿ . ಸಂಸ್ಥೆ ಯ ಅಧಿಕಾರಿಯಾಗಿರುವ ಕಾರಣ ಸಂಸ್ಥೆಯ ನೌಕರರ ನಿಯಮಾವಳಿಗಳನ್ನು ಉಲ್ಲಂಘಿಸಿ ಸಂಸ್ಥೆ ಯ ಪರವಾಗಿ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.